ತುಮಕೂರು ಡಿಸ್ಟ್ರಿಕ್ಟ್.

ತಾರೀಖು 24ನೇ ಜನವರೀ 1887.

ಇವರಿಂದ ಸಮ್ಮಂಧಪಟ್ಟ ಜನಗಳಿಗೆ ತಿಳಿಯಪಡಿಸುವದೇನಂದರೆ.—ತಿಪಟೂರು ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಬೇವಾರಸಾಗಿರತಕ್ಕ ಈ ಕೆಳಗೆ ವಿವರಿಸೋಣಾಗಿರುವ ದಸ್ತಾವೇಜನ್ನ ಹಾಜರ್ ಮಾಡಿದವರೇ ಆಗಲಿ ಅಥವಾ ಅವರಿಂದ ಕ್ರಮವಾಗಿ ಅಧಿಕಾರ ಹೊಂದಿದ ಮುತಾಲೀಕರು ಯಾ ಹಕ್ಕುದಾರರೇ ಆಗಲಿ ಈ ನೋಟೀಸ್ ತಾರೀಖು ಲಾಗಾಯತು ಎಂದು ತಿಂಗಳೊಳಗಾಗಿ ತಿಪಟೂರು ಸಬ್ ರಿಜಿಸ್ಟ್ರಾರ್‌ರಲ್ಲಿ ಹಾಜರಾಗಿ ಸದರೀ ದಸ್ತಾವೇಜನ್ನು ವಾಪಸ್ ಪಡಿಯಲು ತಪ್ಪಿದರೆ 1877ನೇ ಇಸವಿ 3ನೇ ನಂಬರ್ ಇಂಡಿಯನ್ ರಿಜಿಸ್ಟ್ರೇಷನ್ ಆಕ್ಟಿನ 85ನೇ ಸೆಕ್ಷನ್ ಅನುಸರಿಸಿ ನಾಶಮಾಡಲ್ಪಡುವದು.

ದಸ್ತಾವೇಜಿನ ನಂಬರ್.	ದಸ್ತಾವೇಜಿನ ತಾರೀಖು.	ದಸ್ತಾವೇಜು ರಿಜಿಸ್ಟ್ರಿಗೆ ಹಾಜರಾದ ತಾರೀಖು.	ದಸ್ತಾವೇಜು ರಿಜಿಸ್ಟ್ರಾದ ತಾರೀಖು.	ದಸ್ತಾವೇಜು ಬರದು ಕೊಟ್ಟವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜನ್ನ ಬರೆಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
336 1884—85	25—12—84	29—12—84	30—12—84	ತಿಪಟೂರು ತಾಲ್ಲೂಕು ನೋಣವಿನಕೆ ರೆಗ್ಯಾಮದಲ್ಲಿ ಇರುವ ಬಾಣಾವರ ತಾಲ್ಲೂಕು ಲೇಟ್ ಜುಡಿಷಿಯಲ್ ಗವಾಸ್ತೆ ಕಡಬದಕೂಗಿ ಮೇಡು ನರಸುಹ್ಯಾಚಾರ್ಯಮಕ್ಕಳು ಗೋಪಾಲಯ್ಯಂಗಾರ್ರ ಹೆಂಡತಿ ಸೀತಮ್ಮ	ತಿಪಟೂರು ತಾಲ್ಲೂಕು ನೋಣವಿನಕೆರೆ ವಾಸಸ್ಥ ಕಂಭಂ ಅಳಿಂಗರು ಚಾರ್ಯರವರ ಮಕ್ಕಳು ಗರುಡಾಚಾರ್ರು	ಸದರೀ ನೋಣವಿನಕೆರೆ ಗ್ರಾಮದಲ್ಲಿ ಇರುವ ಮನೆ 1ಕ್ಕೆ ಪಕ್ಕ ಬಂದಿ ಪೂರ್ವಕ್ಕೆ ನಗರದ ಕೃಷ್ಣಯ್ಯಂಗಾರ್ರ ಮನೆ, ಪಶ್ಚಿಮಕ್ಕೆ ಲಕ್ಷ್ಮಿನಾರಣಪ್ಪನವರ ಮನೆ ಮಗ್ಗಲು ವೋಣಿ, ದಕ್ಷಿಣಕ್ಕೆ ರಾಜಬೀದಿ, ಉತ್ತರಕ್ಕೆ ಅಂಬೇ ತಿರುಮಲ್ಲಯ್ಯನವರ ಮಾಳು ನಿವೇಶನದ ಮಗ್ಗಲು ವೋಣಿ, ಪೂರ್ವ ಪಶ್ಚಿಮ ಗಜ 18½ ಉತ್ತರ ದಕ್ಷಿಣ ಗಜ 18 ಹೆಂಚಿನ ಮನೆ ಇದಕ್ಕೆ ಕೇದ ಹಿತ್ತಲು ಮತ್ತು ನಿವೇಶನ ಸಹ (300) ರೂಪಾಯಿಗಳಿಗೆ ಖರೀದಿ ಗೆಕೊಟ್ಟು ಯಿರುವದಾಗಿ ವಗೈರೆ.

ಪಿ. ಯರ್. ಕೃಷ್ಣಮೂರ್ತಿ,
ರಿಜಿಸ್ಟ್ರಾರ್.

ಮೈಸೂರು ಡಿಸ್ಟ್ರಿಕ್ಟ್.

ಮೈಸೂರು ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟಿನಲ್ಲಿ.

1887ನೇ ಇಸವಿ ಆರ್ಜೀ ನಂಬರ್ 5.

ಮೃತಪಟ್ಟ ಲಕ್ಷ್ಮೀದೇವಮ್ಮನವರ ಆಸ್ತಿ ವಿಷಯದಲ್ಲಿ.—

ಅರ್ಜೀದಾರ ನರಸಿಹ್ಮಭಟ್ಟರು ಮೃತಪಟ್ಟ ಸದರೀ ಲಕ್ಷ್ಮೀದೇವಮ್ಮನವರಿಗೆ ಮಗ ಆಗಬೇಕಿಂಬ ಹಕ್ಕುದಾರೀಮೇಲೆ ಮಂಜರಾಬಾದ್ ತಾಲ್ಲೂಕು ಯಳೂರು ಹೋಬಳಿ ಕೊಂತ್ಲಾ ಪುರದ ಸ್ಥಳದ ಸದರೀ ನರಸಿಹ್ಮಭಟ್ಟರು ಡಿಫೋ ವಾಸಸ್ಥಳಾಗಿ ಮೃತಪಟ್ಟ ಲಕ್ಷ್ಮೀದೇವಮ್ಮನವರ ಜಿಂದಗಿ ಬಗ್ಯಾಗಿ ಬರತಕ್ಕ 400 ರೂಪಾಯಿಗಳ ಸಾಲವನ್ನು ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ವರಖಾಸ್ತದಾರರಾದ ನರಸಿಹ್ಮಭಟ್ಟರ ಅರ್ಜೀಯನ್ನು 1887ನೇ ಇಸವಿ ಫಿಬ್ರವರೀ ತಿಂಗಳು ತಾರೀಖು 15ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಬ್ತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಲಕ್ಷ್ಮೀದೇವಮ್ಮನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಜನವರೀ ತಿಂಗಳು 11ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

1887ನೇ ಇಸವಿ ಅರ್ಜೀ ನಂಬರ್ 9.

ಮೃತಪಟ್ಟ ಕೂರ್ಮೈಯನವರ ಆಸ್ತಿ ವಿಷಯದಲ್ಲಿ.—

ಅರ್ಜೀದಾರ ಹಾಲಪ್ಪನವರು, ಮೃತಪಟ್ಟ ಸದರೀ ಕೂರ್ಮೈಯನವರಿಗೆ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಮೈಸೂರು ಹೊ ಸ ಅಗ್ರಹಾರದ ಸ್ಥಳದ ಸದರೀ ಹಾಲಪ್ಪನವರು ಸದರೀ ವಾಸಸ್ಥರಾಗಿ ಮೃತಪಟ್ಟ ಕೂರ್ಮೈಯನವರ ಜಿಂದಗಿ ಬಗ್ಯಾಗಿ ಬರತಕ್ಕ 800 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರಟಿಫಿಕೇಟ್ ಬ್ಯಗ್ಯೆ ಈ ಕೋರ್ಟಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಹಾಲಪ್ಪನವರ ಅರ್ಜೀಯನ್ನು 1887ನೇ ಇಸವಿ ಫಿಬ್ರವರೀ ತಿಂಗಳು ತಾರೀಖು 15ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕೂರ್ಮೈಯನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1887ನೇ ಇಸವಿ ಜನವರೀ ತಿಂಗಳು 13ನೇ ತಾರೀಖಿನಲ್ಲಿ ಕೋರ್ಟು ಮೊಹರ್ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಎಸ್. ಹೇಮಾಜಿರಾವ್,
ಡಿಸ್ಟ್ರಿಕ್ಟ್ ಜಡ್ಜ.

ಮೈಸೂರು ಸಬ್ ಜಡ್ಜ್ರೀಯವರ ಕೋರ್ಟಿನಲ್ಲಿ.

ದಿವಾಳಿಯಾದ ಡಿಕ್ರೀ ದೇಣೇದಾರ-ನಂಜನಗೂಡು ತಾಲ್ಲೂಕು ಯೀಚಿಗಹಳ್ಳೀಯಲ್ಲಿರುವ ಕಿವಾಚಾರದ ಅಜ್ಜೇಗೌಡನ ಮಗ ಪಟೇಲ ಲಿಂಗೇಗೌಡನ ವಿಷಯದಲ್ಲಿ.—

ಸ್ಯ 1886ನೇ ಇಸವಿ ದಿವಾಳಿ ಕೇಸ್ ನಂಬರ್ 32.

ಹುಕ್ಕುಂ.

ಮೇಲ್ಕಂಡ ಲಿಂಗೇಗೌಡನೆಂಬವನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜಿ ಅಂಕವು, ಈ ಕೋರ್ಟು ರೂಬರೂ ಅರ್ಜೀದಾರನಾದ ಲಿಂಗೇಗೌಡನ ಪರವಾಗಿ ಅಡ್ವೊಕೇಟ್ ಮೆ॥ ರಾಘವಾಚಾರ್ರು ಹಾಜರು ದರ್ಯಾಫ್ತ್ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮ್ಮಗೆ ಈ ದರ್ಯಾಫ್ತ್ರೀ ನೋಟೀಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು; ಯಾರಂದರೆ—1ನೇ ಮಲ್ಲಯ್ಯ, 2ನೇ ನಾರಣಪ್ಪಾ, 3ನೇ ಶಿವಯ್ಯ, 4ನೇ ಚನ್ನಬಸಪ್ಪ, 5ನೇ ನಂಜಪಯ್ಯ, 6ನೇ ವೀರಭದ್ರಯ್ಯ, 7ನೇ ಮರಿಕಾಳಾ, 8ನೇ ನಂಜಪ್ಪ, 9ನೇ ತಿಮ್ಮಯ್ಯಕಟ್ಟೆ ವಬ್ಬ 10ನೇ ವರ್ಧಣಯ್ಯ, 11ನೇ ಅಂಚೆ ದುನಿಯ್ಯ, 12ನೇ ಪ್ಲೀಡರ್ ರಂಗಂಣ.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಪಟೇಲ ಲಿಂಗೇಗೌಡನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳಿಯಾದವನ್ನ ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕೋಸ್ಕರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆ ಯುದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸ್ಯ 1886ನೇ ಇಸವಿ ಡಿಸಂಬರ್ 22ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತ್ತಿನೀಂದ ಕೊಡಲ್ಪಟ್ಟಿತು.

ಸಾಲದ ಪಟ್ಟಿ.

ನಂಬರು.	ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಜಾಮೀನಗಳು.	ಯಾವಾಗ ದೇಣೆ ಹುಟ್ಟಿದ್ದು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿಯೇನಾದರೂ ಇದ್ದರೆ.	ಷರಾ.
1	ನಂಜನಗೂಡು ಪ್ಲೀಡರ್ ರಂಗಂಣ	ನಮೂದಿಲ್ಲ.	..	ಡಿಕ್ರೀ ಬಾಬತು.	